# ಕರ್ನಾಟಕ ಸರ್ಕಾರ
## (ವಿದ್ಯುತ್ ಪರಿವೀಕ್ಷಣಾಲಯ)

ಮಾಹಿತಿ ಹಕ್ಕು ಕಾಯ್ದೆ 2005ರ ಸೆಕ್ಷನ್ 4(1)(ಬಿ)ರ ಪ್ರಕಾರ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ಕಛೇರಿಯ ಮಾಹಿತಿ.

1. ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಗೆ ಸೇರಿದ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ, ಇಲ್ಲಿ ಕೈಗೊಳ್ಳುವ ಕೆಲಸ ಕಾರ್ಯ ಹಾಗು ಕರ್ತವ್ಯಗಳ ವಿವರಗಳು:-

ವಿದ್ಯುತ್ ಪರಿವೀಕ್ಷಣಾಲಯವು ಕರ್ನಾಟಕ ಸರ್ಕಾರದ ಒಂದು ಇಲಾಖೆಯಾಗಿದ್ದು, ಇದು ಇಂಧನ ಇಲಾಖೆಯ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ವಿದ್ಯುತ್ ಪರಿವೀಕ್ಷಣಾಲಯದ ಕೇಂದ್ರ ಕಛೇರಿಯು ನಿರ್ಮಾಣ ಭವನ, 2ನೇ ಮಹಡಿ, ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು-560010 ವಿಳಾಸದ ಕಟ್ಟಡದಲ್ಲ ಕಾರ್ಯ ನಿರ್ವಹಿಸುತ್ತಿರುತ್ತದೆ. ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾಲಯದ ಇಲಾಖಾ ಮುಖ್ಯಸ್ಥರಾಗಿರುತ್ತಾರೆ. ಮುಖ್ಯ ವಿದ್ಯುತ್ ಪರಿವೀಕ್ಷಕರ ಅಧೀನದಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಮೈಸೂರು, ಧಾರವಾಡ, ಕಲಬುರ್ಗಿ ಮತ್ತು ಮಂಗಳೂರು ಎಂಬ ಆರು ವಲಯಗಳಿದ್ದು, ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ಕಚೇರಿಯು ಒಂದು ವಿಭಾಗ ಕಚೇರಿಯಾಗಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ರವರು ಬೆಂಗಳೂರು ಪಶ್ಚಿಮ ವಿಭಾಗದ ಮುಖ್ಯಸ್ಥರಾಗಿರುತ್ತಾರೆ ಹಾಗೂ ಈ ಕಛೇರಿ ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ ವಲಯ ಕಛೇರಿಯ ನಿಯಂತ್ರಣದಲ್ಲಿರುತ್ತದೆ. ಬೆಂಗಳೂರು ಪಶ್ಚಿಮ ವಿಭಾಗದ ಕಛೇರಿಯು ನಗರದ ನಂ:129, ಮೊದಲನೆ ಮಹಡಿ, 3ನೇ ಮುಖ್ಯ ರಸ್ತೆ, ಸುಬ್ರಮಣ್ಯ-ಭಾರತಿ ರಸ್ತೆ, ಗವಿಪುರಂ ಎಕ್ಸ್‌ಟೆನ್ಷನ್, ಹನುಮಂತನಗರ, ಬೆಂಗಳೂರು-560019 ಇಲ್ಲ ಕಾರ್ಯ ನಿರ್ವಹಿಸುತ್ತಿರುತ್ತದೆ. ಬೆಂಗಳೂರು ಪಶ್ಚಿಮ ವಿಭಾಗದ ವ್ಯಾಪ್ತಿಯಲ್ಲಿ ತಾಂತ್ರಿಕ ವರ್ಗದಲ್ಲಿ ಒಂದು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಹುದ್ದೆ, ಒಂದು ವಿದ್ಯುತ್ ಪರಿವೀಕ್ಷಕರ ಹುದ್ದೆ, ಒಂದು ಉಪ ವಿದ್ಯುತ್ ಪರಿವೀಕ್ಷಕರು ಹುದ್ದೆ, ಎರಡು ಸಹಾಯಕ ವಿದ್ಯುತ್ ಪರಿವೀಕ್ಷಕರು ಹುದ್ದೆಗಳು(ಕ್ಷೇತ್ರೀಯ), ಒಂದು ಸಹಾಯಕ ವಿದ್ಯುತ್ ಪರಿವೀಕ್ಷಕರ ಹುದ್ದೆ(ಕಛೇರಿ), ಒಂದು ಅಧೀಕ್ಷಕರು, ಒಂದು ಪ್ರಥಮ ದರ್ಜೆ ಸಹಾಯಕರು, ಎರಡು ದ್ವಿತೀಯ ದರ್ಜೆ ಸಹಾಯಕರು, ಒಂದು ಜವಾನರು, ಸಹಾಯಕರು ಹಾಗೂ ಕಂಪ್ಯೂಟರ್ ಆಪರೇಟರ್ ಹುದ್ದೆಗಳನ್ನು ಒಳಗೊಂಡಿರುತ್ತವೆ ಈ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ವಿಭಾಗದ ಮುಖ್ಯ ಉದ್ದೇಶಗಳು:

ವಿಭಾಗದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಧವಾದ ವಿದ್ಯುತ್ ಸ್ಥಾವರಗಳು, ವಿದ್ಯುತ್ ಪ್ರಸರಣಾ ಮಾರ್ಗಗಳು ಮತ್ತು ವಿತರಣಾ ಕೇಂದ್ರಗಳು ಕೇಂದ್ರ ವಿದ್ಯುತ್ ಪ್ರಾಧಿಕಾರ (ಸುರಕ್ಷತೆಗೆ ಸಂಬಂಧಿಸಿದ ಕ್ರಮಗಳನ್ನು) ನಿಯಂತ್ರಣ, 2010ಕ್ಕೆ ಅನುಗುಣವಾಗಿ ಸುರಕ್ಷಿತವಾಗಿರುವ ಹಾಗೆ ನಿರ್ವಹಿಸುವುದು ಮತ್ತು ಪಾಲನೆ ಮಾಡುವುದರ ಬಗ್ಗೆ ಗ್ರಾಹಕರುಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ವಿದ್ಯುತ್ತಿನಿಂದ ಮಾನವನಿಗೆ, ಪ್ರಾಣಿಗಳಿಗೆ ಮತ್ತು ಸಾರ್ವಜನಿಕರ ಆಸ್ತಿ-ಪಾಸ್ತಿಗಳಿಗೆ ಯಾವುದೇ ರೀತಿಯ ಹಾನಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಬಗ್ಗೆ ವಿದ್ಯುತ್ ಗ್ರಾಹಕರುಗಳಿಗೆ ಹಾಗೂ ಸರಬುರಾಜುದಾರರಿಗೆ ಸಲಹೆ ನೀಡುವುದು.

ಮೇಲಿನ ಮುಖ್ಯ ಉದ್ದೇಶಗಳನ್ನು ಕಾರ್ಯ ರೂಪಕ್ಕೆ ತರಲು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ಪಶ್ಚಿಮವಿಭಾಗ ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

ವಿದ್ಯುತ್ ಬಳಕೆದಾರರ ಮತ್ತು ಸರಬರಾಜುದಾರರ ವಿದ್ಯುತ್ ಸ್ಥಾವರಗಳನ್ನು ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010ರ ಅನುಗುಣವಾಗಿ ಸ್ಥಾಪಿಸುವುದು ಕಡ್ಡಾಯವಾಗಿರುವುದರಿಂದ ನಿಯಮಗಳ ಪ್ರಕಾರ ವಿದ್ಯುತ್ ಮಾರ್ಗಗಳು ವಿತರಣಾ ಕೇಂದ್ರಗಳು, ಅಧಿಕ ಒತ್ತಡ ಸ್ಥಾವರ, ವಿದ್ಯುತ್ ಜನಕಗಳು ಮತ್ತು ಬಹುಮಹಡಿ ಕಟ್ಟಡ, ಲಿಫ್ಟ್/ಎಸ್ಕಲೇಟರ್‌ಗಳು, ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಅನುಮೋದನೆಯಾದ ನೀಲಿ ನಕ್ಷೆಯ ಪ್ರಕಾರ ಸ್ಥಾಪಿಸುವಂತೆ ತಿಳುವಳಿಕೆ ನೀಡುವುದು.

1. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ(ಸುರಕ್ಷತೆ ಹಾಗೂ ವಿದ್ಯುತ್ ಪೂರೈಕೆ) ರೆಗ್ಯೂಲೇಶನ್ಸ್, 2010, ನ್ಯಾಷನಲ್ ವಿದ್ಯುಚ್ಛಕ್ತಿ ಕೋಡ್, ಹಾಗು ಇತರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿನಿಯಮ ಪ್ರಕಾರ, ಅಧಿಕಾರಿಗಳಿಗೆ ನೀಡಿರುವ ಪ್ರತ್ಯಾಯೋಜನೆಯ ಮಿತಿಯಲ್ಲಿ ಹೆಚ್.ಟಿ ಸ್ಥಾವರ, ವಿದ್ಯುತ್ ಜನಕ, ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಅಳವಡಿಸಲ್ಪಡುವ ಪರಿವರ್ತಕ ಕೇಂದ್ರಗಳನ್ನು ಗ್ರಾಹಕರು ಅಳವಡಿಸಿಕೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳಲು ಹಾಗು ಗ್ರಾಹಕರಿಗೆ ನಿಯಮಗಳ ಪಾಲನೆಗೆ ಅನುಕೂಲವಾಗುವಂತೆ, ಈ ಕಛೇರಿ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆಯನ್ನು ಕೈಗೊಳ್ಳುತ್ತದೆ
2. ಅಧಿಕಾರ ಪ್ರತ್ಯಾ ಯೋಜನೆ ಅನುಸಾರ 2000ಕೆವಿಎ ವರೆಗಿನ ಒಟ್ಟು ಸಾಮರ್ಥ್ಯವುಳ್ಳ ವಿದ್ಯುತ್ ಪರಿವರ್ತಕದ ಸಬ್‌ಸ್ಟೇಶನ್‌ಗಳ ಹಾಗು ವಿದ್ಯುತ್‌ಜನಕಗಳ ನಕ್ಷೆ ಪರಿಶೀಲನೆ, ಪರಿವೀಕ್ಷಣೆ ಹಾಗು ಚಾಲನಾ ಅನುಮೋದನೆ. ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಪಟ್ಟ ಪರಿವರ್ತಕ ಕೇಂದ್ರಗಳ ಹಾಗು ವಿದ್ಯುತ್ ಮಾರ್ಗಗಳ ಪರಿವೀಕ್ಷಣೆ ಮತ್ತು ಅನುಮೋದನೆ, 33ಕೆವಿ &66ಕೆವಿ ಸಾಮರ್ಥ್ಯದವರೆಗಿನ ಹೊಸ ಬೆಸ್ಕಾಂ/ಕೆ.ಪಿ.ಟಿ.ಸಿ.ಎಲ್. ಉಪಕೇಂದ್ರಗಳ ಪರಿವೀಕ್ಷಣೆ, ಸ್ವಯಂ ನಿರ್ವಹಣೆ ಯೋಜನೆಯಡಿಯಲ್ಲಿ ಅಳವಡಿಸಲ್ಪಡುವ ಒಟ್ಟು 2000ಕೆ.ವಿ.ಎ. ಸಾಮರ್ಥ್ಯದವರೆಗಿನ ಪರಿವರ್ತಕ ಕೇಂದ್ರಗಳ ನಕ್ಷೆ ಅನುಮೋದನೆ ಹಾಗು ಚಾಲನಾ ಅನುಮೋದನೆ, ಕ್ಷಕಿರಣ, ನಿಯಾನ್ ಸೈನ್ಸ್ ಮತ್ತು 2000ಕೆವಿಎ. ಸಾಮರ್ಥ್ಯದವರೆಗಿನ ತಾತ್ಕಾಲಿಕ ವಿದ್ಯುತ್ ಸ್ಥಾವರಗಳಿಗೆ ಚಾಲನಾ ಅನುಮೋದನೆಯನ್ನು ನೀಡುವ ಕಾರ್ಯ ವೈಖರಿಯನ್ನು ನಿರ್ವಹಿಸುತ್ತದೆ.

3. ಹೆಚ್.ಟಿ/ಎಲ್.ಟಿ ಸರಬರಾಜು ಸಂಪರ್ಕದ 2000ಕೆವಿಎ ಸಾಮರ್ಥ್ಯದವರೆಗಿನ ಪರಿವರ್ತಕ ಕೇಂದ್ರವಿರುವ 24 ಮೀಟರ್‌ವರೆಗಿನ ಎತ್ತರದ ಬಹುಮಹಡಿ ಕಟ್ಟಡಗಳ ನಕ್ಷೆ ಅನುಮೋದನೆ ಹಾಗು ಪರಿವರ್ತಕ ಕೇಂದ್ರಗಳ ಕಟ್ಟಡದ ವಿದ್ಯುತ್ ಸ್ಥಾವರವನ್ನು ಸುರಕ್ಷತಾ ನಿಯಮಗಳನ್ನು ಪಾಲಿಸಿ ಅಳವಡಿಸಿರುವ ಬಗ್ಗೆ ಪರಿವೀಕ್ಷಣೆ ನಡೆಸಿ ಚಾಲನಾ ಅನುಮೋದನೆಯನ್ನು ನೀಡುವುದು.
4. ಅಧಿಕಾರ ಪ್ರತ್ಯಾ ಯೋಜನೆ ಅನುಸಾರ ವಿದ್ಯುತ್ ಅಪಘಾತಗಳ ಮತ್ತು ಬೆಂಕಿ ಅಪಘಾತಗಳ ತನಿಖೆ ನಡೆಸಿ ಅದರ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಈ ಅಪಘಾತಗಳು ಮತ್ತೆ ಮರುಕಳಿಸದಂತೆ ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿದ್ಯುತ್ ಸರಬರಾಜು ಕಂಪನಿಯ ಅಧಿಕಾರಿಗಳಿಗೆ ಸೂಚನೆ ನೀಡುವುದು ಹಾಗು ಪಾಲನಾ ಕ್ರಮಕ್ಕೆ ಒತ್ತಾಯಿಸುವುದು.
5. ವಿದ್ಯುತ್ ಸರಬರಾಜುದಾರರ, ಪರವಾನಿಗೆದಾರರ ಮತ್ತು ಹಂಚಿಕೆದಾರರ ಐಪಿಪಿ ಕಂಪನಿಗಳು,ಸ್ವ ವಿದ್ಯುತ್ ಉತ್ಪಾದಕರು ಸರ್ಕಾರಕ್ಕೆ ಪಾವತಿಸಬೇಕಾದ ವಿದ್ಯುಚ್ಛಕ್ತಿ ತೆರಿಗೆ ಬಗ್ಗೆ ಮೇಲ್ವಿಚಾರಣೆ ಮತ್ತು ತೆರಿಗೆ ವಸೂಲು ಮಾಡುವುದು ಹಾಗು ಸರ್ಕಾರವು ಸ್ವವಿದ್ಯುತ್ ಉತ್ಪಾದನೆಯ ಬಳಕೆಯ ಮೇಲೆ ವಿದ್ಯುಚ್ಛಕ್ತಿ ತೆರಿಗೆ ವಿಧಿಸಿದಲ್ಲಿ ಅದರ ವಸೂಲಾತಿಯನ್ನು ಮಾಡಿ ಲೆಕ್ಕ ವಿವರಗಳ ದಾಖಲೆಗಳನ್ನು ಕಾಪಾಡುವುದು.
6. ವಿದ್ಯುತ್ ಗುತ್ತಿಗೆದಾರರ, ತಂತಿ ಕೆಲಸಗಾರರ, ವಿದ್ಯುತ್ ಮೇಲ್ವಿಚಾರಕರ ಹಾಗು ವಿಶೇಷ ವಯರಿಂಗ್ ಪರವಾನಿಗೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿ ಕೇಂದ್ರ ಕಛೇರಿಗೆ ಪ್ರತೀ ತಿಂಗಳು ಶಿಫಾರಸಿನೊಂದಿಗೆ ಕಳುಹಿಸಿಕೊಡುವ ಕಾರ್ಯ, ಅಲ್ಲದೇ ತಂತಿ ಕೆಲಸಗಾರರ ಪರವಾನಿಗೆ ಹಾಗು ವಿದ್ಯುತ್ ಮೇಲ್ವಿಚಾರಕರ ಪರ್ಮಿಟ್‌ಗಳನ್ನು ಹಿಂಬರಹಗೊಳಿಸುವ ಕಾರ್ಯವನ್ನು ಈ ಕಛೇರಿ ಕೈಗೊಳ್ಳುತ್ತದೆ.
7. ನಿಗದಿತ ವಾಯಿದೆಯೊಳಗೆ ನೀಡಲ್ಪಟ್ಟ ಸಿನೆಮಾ ಆಪರೇಟರ್ ಪರ್ಮಿಟ್‌ಗಳ ನವೀಕರಣ ಹಾಗು ಹಿಂಬರಹಗೊಳಿಸುವುವಿಕೆ.
8. ಕೇಂದ್ರ ಕಛೇರಿಯು ಪ್ರತೀ ವರ್ಷ ನಡೆಸುವ ವಿದ್ಯುತ್ ಮೇಲ್ವಿಚಾರಕರ, ಮೈನಿಂಗ್ ಮೇಲ್ವಿಚಾರಕರ ಹಾಗು ತಂತಿ ಕೆಲಸಗಾರರ ಪರೀಕ್ಷೆಗೆ ಸಂಬಂಧಪಟ್ಟ ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲಿಸಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
9. ಅಧಿಕಾರ ಪ್ರತ್ಯಾ ಯೋಜನೆ ಅನುಸಾರ, ಹೆಚ್.ಟಿ ಸ್ಥಾವರ, ವಿದ್ಯುತ್‌ಜನಕ, ಕ್ಷಕಿರಣ, ಲಿಫ್ಟ್, ಬಹುಮಹಡಿ ಕಟ್ಟಡದ ವಿದ್ಯುತ್ ಸ್ಥಾವರ, ನಿಯಾನ್ ಸೈನ್ಸ್, ವಿಡಿಯೋ, ಬೆಸ್ಕಾಂ ವಿದ್ಯುತ್ ಪರಿವರ್ತಕಗಳ ಮತ್ತು ಮಾರ್ಗಗಳ ಮತ್ತು 110ಕೆವಿ ಸಾಮರ್ಥ್ಯದ ವರೆಗಿನ ಕೆ.ಪಿ.ಟಿ.ಸಿ.ಎಲ್/ ಬೆಸ್ಕಾಂನ ವಿದ್ಯುತ್ ಉಪಕೇಂದ್ರಗಳ ಹಾಗೂ ವಿಡಿಯೋ ಮತ್ತು ಖಾಯಂ ಹಾಗೂ ಅರೆಖಾಯಂ ಚಿತ್ರ ಮಂದಿರ ಮೊದಲಾದವುಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ಸರ್ಕಾರ ನಿಗದಿಪಡಿಸಿದ ಅವಧಿಯ ಸಮಯದಲ್ಲಿ ಕಾಲಕಾಲಕ್ಕೆ ಮಾಡಿ, ಗ್ರಾಹಕರು ವಿದ್ಯುತ್ ಸ್ಥಾವರಗಳ ಸುರಕ್ಷತೆಯನ್ನು ಸಂಬಂಧಪಟ್ಟ ನಿಯಮಗಳ ಅನುಸಾರ ಕಾಪಾಡುತ್ತಿರುವುದನ್ನು ಹಾಗು ಸ್ಥಾವರಗಳಲ್ಲಿರುವ ಲೋಪ ದೋಷಗಳನ್ನು ಗ್ರಾಹಕರು ವಿದ್ಯುತ್ ಗುತ್ತಿಗೆದಾರರಿಂದ ಸರಿಪಡಿಸಿ ಸಮಾಪನ ವರದಿಯನ್ನು ಪಡೆಯುವುದು.

**2.ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಬೆಂಗಳೂರು ಪಶ್ಚಿಮ ವಿಭಾಗ ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು:-**

**ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ,**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮರವರು, ಬೆಂಗಳೂರು ಪಶ್ಚಿಮ ವಿಭಾಗ ಕಛೇರಿಯ ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಮುಖ್ಯಸ್ಥರಾಗಿರುತ್ತಾರೆ. ಎಲ್ಲಾ ತಾಂತ್ರಿಕ ಅಧಿಕಾರಿಗಳು ಹಾಗು ಸಿಬ್ಬಂದಿ ವರ್ಗದವರು ಆಡಳಿತಾಧಿಕಾರಿಯವರ ಅಧೀನದಲ್ಲಿರುತ್ತಾರೆ. ನಿಯಂತ್ರಣ ಅಧಿಕಾರಿಗಳಿಂದ ಬಿಡುಗಡೆಗೊಳಿಸಲ್ಪಟ್ಟ ಅನುದಾನದ ಪ್ರಕಾರ ವೇತನ ಬಟವಾಡೆ ಹಾಗು ಕಛೇರಿಯ ಖರ್ಚು ವೆಚ್ಚಗಳ ಜವಾಬ್ದಾರಿ ಇವರದಾಗಿರುತ್ತದೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ವಲಯದ ಕಾರ್ಯ ವ್ಯಾಪ್ತಿಯು ಬೆಸ್ಕಾಂನ ಉಪ ವಿಭಾಗದ ಡಬ್ಲೂ-1, ಡಬ್ಲೂ-2, ಡಬ್ಲೂ-6, ಡಬ್ಲೂ-7, ಡಬ್ಲೂ-8, ಕೆ-1, ಕೆ-2, ಕೆ-3, ಕೆ-4 ಮತ್ತು ತುಮಕೂರು ಜಿಲ್ಲೆ ಆಗಿದ್ದು, ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

ಅಧಿಕಾರ ಪ್ರತ್ಯಾ ಯೋಜನೆ ಅನುಸಾರ ವಿವಿಧ ರೀತಿಯ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ ಮತ್ತು ಸ್ಥಾವರಗಳ ಚಾಲನೆಗೆ ಅನುಮತಿಯನ್ನು ನೀಡುವುದು, ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಮತ್ತು ಗ್ರಾಹಕರು ನಿಯಮಗಳನುಸಾರ ವಿದ್ಯುತ್ ಸ್ಥಾವರಗಳ ಸುರಕ್ಷತೆಯನ್ನು ಕಾಪಾಡುವಂತೆ ಕ್ರಮ ಕೈಗೊಳ್ಳುವುದು ಇವರ ಕರ್ತವ್ಯವಾಗಿರುತ್ತದೆ. ಕಛೇರಿಯ ಮಾಸಿಕ ಪ್ರಗತಿ ವರದಿ, ಕ್ರೋಡೀಕೃತ ಡಿಸಿಬಿ, ಕಛೇರಿಯ ಖರ್ಚು ವೆಚ್ಚ ತಖ್ತೆ, ಖಜಾನೆಯ ಚಲನ್ ರಿಕನ್ಸಿಲಿಯೇಷನ್‌ಗಳ ವರದಿಯನ್ನು ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣರವರಿಗೆ ಸಲ್ಲಿಸುವುದು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ವ್ಯಾಪ್ತಿಗೆ ಬರುವ 5ಕ್ಕೆ ಮೇಲ್ಪಟ್ಟು 8 ಮಾನವರಿಗೆ ಸಂಭವಿಸುವ ವಿದ್ಯುತ್ ಅಪಘಾತಗಳ ತನಿಖೆಯನ್ನು ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಇಲಾಖೆಯ ಮೇಲಾಧಿಕಾರಿಗಳು ವಹಿಸುವ ಕಛೇರಿ ಕೆಲಸವನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಗ್ರಾಹಕರುಗಳಿಂದ ಕಛೇರಿಗೆ ಸಲ್ಲಿಸಲ್ಪಡುವ ಎಲ್ಲಾ ಕಡತಗಳ ವಿಲೇವಾರಿಯನ್ನು ಕಛೇರಿಯ ನಿಯಮಗಳನುಸಾರ ಸೂಕ್ತಸಮಯದಲ್ಲಿ ಮಾಡುವ ಜವಾಬ್ದಾರಿ ಇವರದಾಗಿರುತ್ತದೆ. ಸಾರ್ವಜನಿಕ ಮಾಹಿತಿ ಹಕ್ಕು, 2005ರ ಅಡಿ ಮೇಲ್ಮನವಿ ಪ್ರಾಧಿಕಾರಿಯಾಗಿ ಇವರು ಕಾರ್ಯನಿರ್ವಹಿಸುತ್ತಾರೆ.

**ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ,**

ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ಪಶ್ಚಿಮ ರವರ ಕಾರ್ಯ ವ್ಯಾಪ್ತಿಯು ಬೆಸ್ಕಾಂನ ಉಪ ವಿಭಾಗದ ಡಬ್ಲೂ-1, ಡಬ್ಲೂ-2, ಡಬ್ಲೂ-6, ಡಬ್ಲೂ-7, ಡಬ್ಲೂ-8, ಕೆ-1, ಕೆ-2 ಕೆ-3, ಕೆ-4 ಮತ್ತು ತುಮಕೂರು ಜಿಲ್ಲೆ ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

ಅಧಿಕಾರ ಪ್ರತ್ಯಾ ಯೋಜನೆ ಅನುಸಾರ ವಿವಿಧ ರೀತಿಯ ವಿದ್ಯುತ್ ಸ್ಥಾವರಗಳ ನೀಲ ನಕ್ಷೆ ಅನುಮೋದನೆ/ ಚಾಲನೆಗೆ ಅನುಮತಿ ನೀಡುವುದು ಮತ್ತು ಈ ಸ್ಥಾವರದ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಹಾಗು ಅಧಿಕಾರ ಪ್ರತಿ ನಿಯೋಜನೆ ಅನುಸಾರ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಮತ್ತು ಗ್ರಾಹಕರು ನಿಯಮಗಳನುಸಾರ ವಿದ್ಯುತ್ ಸ್ಥಾವರಗಳ ಸುರಕ್ಷತೆಯನ್ನು ಕಾಪಾಡುವಂತೆ ಕ್ರಮ ಕೈಗೊಳ್ಳುವುದು ಇವರ ಕರ್ತವ್ಯವಾಗಿರುತ್ತದೆ ಹಾಗು ಇತರೆ ಯಾವುದೇ ಮೇಲಾಧಿಕಾರಿಗಳು ವಹಿಸುವ ಕೆಲಸ ನಿರ್ವಹಿಸುವುದು. ಪ್ರಗತಿ ವರದಿ ಸಲ್ಲಿಸುವುದು, ಅಧಿಕಾರ ಪ್ರತ್ಯಾಯೋಜನೆ ಅನುಸಾರ ಕಛೇರಿಯ ತಾಂತ್ರಿಕ

ಕಡತಗಳ ಹಾಗೂ ವಹಿಗಳ ನಿರ್ವಹಣೆ, ಜಿಲ್ಲೆಯ ವಿದ್ಯುತ್ ಸ್ಥಾವರಗಳ ಅಂಕಿ-ಅಂಶಗಳ ವಿವರಗಳನ್ನು ತಯಾರಿಸಿ ನಿರ್ವಹಿಸುವುದು, ಡಿಸಿಬಿ ಕಡತಗಳ ಉಸ್ತುವಾರಿ. ವಿದ್ಯುತ್ ಪರಿವೀಕ್ಷಕರ ವ್ಯಾಪ್ತಿಗೆ ಬರುವ 1ಕ್ಕೆ ಮೇಲ್ಪಟ್ಟು 5 ಮಾನವರಿಗೆ ಸಂಭವಿಸುವ ವಿದ್ಯುತ್ ಅಪಘಾತಗಳ ತನಿಖೆ, ಬೆಂಕಿ ಅಪಘಾತಗಳ ತನಿಖೆ, ಆನೆಗಳಿಗೆ ಸಂಭವಿಸುವ ಮಾರಣಾಂತಿಕ ಅಪಘಾತಗಳ ತನಿಖೆಯನ್ನು ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. ಮುಖ್ಯ ವಿದ್ಯುತ್ ಪರಿವೀಕ್ಷಕರು ಹಾಗೂ ಇಲಾಖೆಯ ಮೇಲಾಧಿಕಾರಿಗಳು ವಹಿಸುವ ಕಛೇರಿ ಕೆಲಸವನ್ನು ನಿರ್ವಹಿಸುವುದು ಇವರ ಜವಾಬ್ದಾರಿಯಾಗಿರುತ್ತದೆ. ಗ್ರಾಹಕರುಗಳಿಂದ ಕಛೇರಿಗೆ ಸಲ್ಲಿಸಲ್ಪಡುವ ಎಲ್ಲಾ ಕಡತಗಳ ವಿಲೇವಾರಿಯನ್ನು ಕಛೇರಿಯ ನಿಯಮಗಳನುಸಾರ ಸೂಕ್ತಸಮಯದಲ್ಲಿ ಮಾಡುವ ಜವಾಬ್ದಾರಿ ಇವರದಾಗಿರುತ್ತದೆ. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರುಗಳು ನೀಡಬೇಕಾಗಿರುತ್ತದೆ.

**ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ.**

ಉಪ ವಿದ್ಯುತ್ ಪರಿವೀಕ್ಷಕರವರು ಬೆಂಗಳೂರು ಪಶ್ಚಿಮ ವಲಯದ ಕಾರ್ಯ ವ್ಯಾಪ್ತಿಯು ಬೆಸ್ಕಾಂನ ಉಪ ವಿಭಾಗದ ಡಬ್ಲೂ-1, ಡಬ್ಲೂ-2, ಡಬ್ಲೂ-6, ಡಬ್ಲೂ-7, ಡಬ್ಲೂ-8, ಕೆ-1, ಕೆ-2, ಕೆ-3ಮತ್ತುಕೆ-4 ಹಾಗೂ ಅಧಿಕಾರ ಪ್ರತ್ಯಾಯೋಜನೆಯಂತೆ ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

ಅಧಿಕಾರ ಪ್ರತ್ಯಾ ಯೋಜನೆ ಅನುಸಾರ ವಿವಿಧ ರೀತಿಯ ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆ ಅನುಮೋದನೆ/ ಚಾಲನೆಗೆ ಅನುಮತಿ ನೀಡುವುದು ಮತ್ತು ಈ ಸ್ಥಾವರದ ಸುರಕ್ಷತೆ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಹಾಗು ಅಧಿಕಾರ ಪ್ರತಿ ನಿಯೋಜನೆ ಅನುಸಾರ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು ಮತ್ತು ಗ್ರಾಹಕರು ನಿಯಮಗಳನುಸಾರ ವಿದ್ಯುತ್ ಸ್ಥಾವರಗಳ ಸುರಕ್ಷತೆಯನ್ನು ಕಾಪಾಡುವಂತೆ ಕ್ರಮ ಕೈಗೊಳ್ಳುವುದು ಇವರ ಕರ್ತವ್ಯವಾಗಿರುತ್ತದೆ ಹಾಗು ಇತರೆ ಯಾವುದೇ ಮೇಲಾಧಿಕಾರಿಗಳು ವಹಿಸುವ ಕೆಲಸ ನಿರ್ವಹಿಸುವುದು. ಪ್ರಗತಿ ವರದಿ ಸಲ್ಲಿಸಿವುದು, ಅಧಿಕಾರ ಪ್ರತ್ಯಾ ಯೋಜನೆ ಅನುಸಾರಕಛೇರಿಯ ತಾಂತ್ರಿಕ ಕಡತಗಳ ಹಾಗೂ ವಹಿಗಳ ನಿರ್ವಹಣೆ, ವಿದ್ಯುತ್ ಸ್ಥಾವರಗಳ ಅಂಕಿ-ಅಂಶಗಳ ವಿವರಗಳನ್ನು ತಯಾರಿಸಿ ನಿರ್ವಹಿಸುವುದು, ಡಿಸಿಬಿ ಮತ್ತು ಜಿ ಮತ್ತು ಎಫ್ ನಮೂನೆ ಕಡತಗಳ ಉಸ್ತುವಾರಿ. ಒಬ್ಬ ಮನುಷ್ಯ (ಮಾರಣಾಂತಿಕ) ಹಾಗು ಮನುಷ್ಯರಿಗೆ ಮಾರಣಾಂತಿಕವಲ್ಲದ ವಿದ್ಯುತ್ ಅಪಘಾತಗಳ ತನಿಖೆಯನ್ನು ಮಾಡಿ, ತನಿಖಾ ವರದಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. ಇವರ ವ್ಯಾಪ್ತಿಗೆ ಬರುವ ತೆರಿಗೆ ವಸೂಲಾತಿ ಬಗ್ಗೆ ನೋಡಿಕೊಳ್ಳುವುದು ಹಾಗು ಮೇಲಾಧಿಕಾರಿಗಳು ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು. ಇಲಾಖೆ ವತಿಯಿಂದ ಪ್ರತಿ ವರ್ಷ ನಡೆಯಲಿರುವ ಮೇಲ್ವಿಚಾರಕರ, ತಂತಿ ರಹದಾರರ ಪರೀಕ್ಷಾ ಅರ್ಜಿಗಳ ಉಸ್ತುವಾರಿ ನೋಡಿಕೊಳ್ಳುವುದು. ಅಧಿಕಾರ ಪ್ರತ್ಯಾ ಯೋಜನೆ ಅನುಸಾರವಿದ್ಯುತ್ ಗುತ್ತಿಗೆದಾರರ ಪರವಾನಿಗೆಗಳ ಹೊಸ ಮತ್ತು ನವೀಕರಣ, ವಿದ್ಯುತ್ ಮೇಲ್ವಿಚಾರಕರ ಹಾಗೂ ತಂತಿ ಕೆಲಸಗಾರರ ಹೊಸ ಮತ್ತು ನವೀಕರಣದ ಅರ್ಜಿಗಳನ್ನು ಪರಿಶೀಲಿಸಿ, ಸ್ವೀಕರಿಸಿ ಕೇಂದ್ರ ಕಛೇರಿಗೆ ರವಾನಿಸುವುದು. ವಿದ್ಯುತ್ ಮೇಲ್ವಿಚಾರಕರು ಹಾಗೂ ತಂತಿ ಕೆಲಸಗಾರರ ರಹದಾರಿಗಳನ್ನು ವಿದ್ಯುತ್ ಗುತ್ತಿಗೆದಾರರ ಪರವಾನಿಗೆಗಳಿಗೆ ಹಿಂಬರಹ ಮಾಡುವುದು. ವಿಶೇಷ ತಂತಿ ಕೆಲಸಗಾರರ ಹೊಸ ಮತ್ತು ನವೀಕರಣ ಅರ್ಜಿಗಳ ಪರಿಶೀಲನೆ ಮಾಡುವುದು ಹಾಗು ಕೇಂದ್ರ ಕಛೇರಿಗೆ ರವಾನಿಸುವುದು. ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರುಗಳು ನೀಡಬೇಕಾಗಿರುತ್ತದೆ.

**ಸಹಾಯಕ ವಿದ್ಯುತ್ ಪರಿವೀಕ್ಷಕರು (ಕ್ಷೇತ್ರೀಯ-1 & 2)**

ಇವರಗಳು ಕಾರ್ಯ ವ್ಯಾಪ್ತಿಗೆ ಬರುವ ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟ ವಿದ್ಯುತ್ ಪರಿವರ್ತಕ ಕೇಂದ್ರಗಳ, ಲೈನ್‌ಗಳ ಪರಿವೀಕ್ಷಣೆ ನಡೆಸಿ ಚಾಲನೆಗೆ ಅನುಮತಿ ನೀಡಲು ಉಪ ವಿದ್ಯುತ್ ಪರಿವೀಕ್ಷಕರಿಗೆ ವರದಿ ಮಾಡುವುದು ಹಾಗು ಅಧಿಕಾರ ಪ್ರತಿನಿಯೋಜನೆ ಅನುಸಾರ ವಿದ್ಯುತ್ ಪರಿವರ್ತಕ ಕೇಂದ್ರಗಳ, ಲೈನ್‌ಗಳ ನಿಯತಕಾಲಿಕ ಪರಿವೀಕ್ಷಣೆ, ವಿದ್ಯುತ್ ಜನಕಗಳ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸುವುದು. ಕಛೇರಿಯ ಮಾಸಿಕ ಪ್ರಗತಿ ವರದಿ ತಯಾರಿಸುವಲ್ಲಿ ಮೇಲಾಧಿಕಾರಿಗಳಿಗೆ ಸಹಕರಿಸುವುದು ಹಾಗು ವಿದ್ಯುತ್ ಸ್ಥಾವರಗಳ ಕಡತಗಳ ಅಂಕಿಅಂಶಗಳ ಮಾಹಿತಿ ತಯಾರಿಸುವುದು. ಪ್ರಾಣಿಗಳಿಗೆ ಮಾರಣಾಂತಿಕವಾದ ವಿದ್ಯುತ್ ಅಪಘಾತಗಳ ತನಿಖೆ ಮಾಡುವುದು ಹಾಗು ಉಪ ವಿದ್ಯುತ್ ಪರಿವೀಕ್ಷಕರಿಗೆ ವರದಿ ಮಾಡುವುದು. ಮೇಲಾಧಿಕಾರಿಗಳು ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು. ವಿದ್ಯುತ್ ಸ್ಥಾವರಗಳ ಅಂಕಿ-ಅಂಶಗಳ ವಿವರಗಳನ್ನು ತಯಾರಿಸಿ ನಿರ್ವಹಿಸುವುದು, ಡಿಸಿಬಿ ನಮೂನೆ ತಯಾರಿಸುವಲ್ಲಿ ಮೇಲಾಧಿಕಾರಿಗಳಿಗೆ ಸಹಾಯ ಮಾಡುವುದು. ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

**ಸಹಾಯಕ ವಿದ್ಯುತ್ ಪರಿವೀಕ್ಷಕರು (ಕಛೇರಿ).**

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರರವರಿಗೆ ತಾಂತ್ರಿಕ ವಿಷಯದಲ್ಲಿ ಸಹಾಯಕರಾಗಿರುತ್ತಾರೆ. ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಕಾರ್ಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ವಿಧವಾದ ವಿದ್ಯುತ್ ಸ್ಥಾವರಗಳ ನಕ್ಷೆ ಅನುಮೋದನೆ ಮತ್ತು ಚಾಲನಾ ಅನುಮೋದನೆಗಳ ಕಡತಗಳನ್ನು ಪರಿಶೀಲಿಸಿ ಟಿಪ್ಪಣಿ ಮಂಡಿಸುವುದು ಮತ್ತು ತಾಂತ್ರಿಕ ವಿಷಯಕ್ಕೆ ಸಂಬಂಧಪಟ್ಟ ಕಡತಗಳ ವಿಲೇವಾರಿಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಕಡತ ಪಾಲನೆ ಮಾಡುವುದು, ಬೆಂಕಿ ಅಪಘಾತ ಮತ್ತು ವಿದ್ಯುತ್ ಅಪಘಾತಗಳ ವರದಿಗಳನ್ನು ತಯಾರಿಸುವಲ್ಲಿ ಸಹಕರಿಸುವುದು. ಮಾಸಿಕ ಕಛೇರಿಯ ಪ್ರಗತಿ ವರದಿ ತಯಾರಿಸುವುದು ಹಾಗು ಅಂಕಿ ಅಂಶಗಳ ನಿರ್ವಹಣೆ ಮತ್ತು ವಿಭಾಗದ ಎಲ್ಲಾ ಸ್ಥಾವರಗಳ ಅಂಕಿ ಅಂಶಗಳ ವರದಿಯನ್ನು ಸಿದ್ಧಪಡಿಸುವುದು .ಮೇಲಾಧಿಕಾರಿಗಳ ನಿರ್ದೇಶನದಂತೆ ಇತರೆ ಕೆಲಸಗಳನ್ನು ನಿರ್ವಹಿಸುವುದು ಮತ್ತು ಕಛೇರಿಯ ನಿಯಮದಂತೆ ಎಲ್ಲಾ ಕೆಲಸಗಳನ್ನು ನಿಗದಿತ ಸಮಯದಲ್ಲಿ ಮುಗಿಸುವುದು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ವೃತ್ತಕ್ಕೆ ಸಾರ್ವಜನಿಕ ತಾಂತ್ರಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

ಅಧೀಕ್ಷಕರು

ಹಾಜರಾತಿ ಪುಸ್ತಕದ ನಿರ್ವಹಣೆ, ಕಛೇರಿ ಖರ್ಚಿನ ವರದಿ, (62-ಬಿ) 0043 ಕಂದಾಯ ಚಲನ್ ವರದಿಯ ನಿರ್ವಹಣೆ ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ಸೇವಾ ಪುಸ್ತಕ ನಿರ್ವಹಣೆ, ಹೆಚ್. ಆರ್. ಎಂ.ಎಸ್. ಮೂಲಕ ಅಧಿಕಾರಿಗಳ/ ಸಿಬ್ಬಂದಿ ವೇತನ ಬಿಲ್ ಇತರೆ ಬಿಲ್ಲುಗಳ ತಯಾರಿಕೆ, ಹಾಗೂ ಆಡಳತಾತ್ಮಕ ವಿಷಯಗಳಲ್ಲಿ ಕಛೇರಿ ಮುಖ್ಯಸ್ಥರಿಗೆ ಸಹಕರಿಸುವುದು. ಆದಾಯ ತೆರಿಗೆ, ಟಿ.ಡಿ.ಎಸ್ ಫೈಲ್ ಮಾಡುವುದು. ಮಾಹಿತಿ ಹಕ್ಕು ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ನಿರ್ವಹಿಸುವುದು. ಆಡಳತ, ಅಕೌಂಟೆಂಟ್ ಜನರಲ್‌ರವರ ಲೆಕ್ಕ ತಪಾಸಣೆಗೆ ಉತ್ತರಿಸುವುದು. ಕಛೇರಿಯ ದಾಖಲೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆ. ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಸಾರ್ವಜನಿಕರು ಮಾಹಿತಿ ಹಕ್ಕಿನಡಿ ಕೇಳುವಂತಹ ಮಾಹಿತಿಯನ್ನು ಇವರು ನೀಡಬೇಕಾಗಿರುತ್ತದೆ.

ಪ್ರಥಮ ದರ್ಜೆ ಸಹಾಯಕರು.

ಸೇವೆಗಳು ಮತ್ತು ಸೇವಾ ನಿಯಮಗಳ ಪರಿಪಾಲನೆ, ಹೆಚ್.ಆರ್.ಎಮ್.ಎಸ್‌ಗೆ ಸಂಬಂಧಪಟ್ಟಂತೆ ಕಾರ್ಯ ನಿರ್ವಹಣೆ, ಪ್ರಯಾಣ ವೆಚ್ಚ, ಮುಂಗಡ ಬಿಲ್ಲು, ಅಧಿಕಾರಿಗಳ ಹಾಗು ಸಿಬ್ಬಂದಿ ವರ್ಗಗಳ ವೇತನ ಬಿಲ್ಲುಗಳು, ಗಳಿಕೆ ರಜೆ ನಗದೀಕರಣ ಬಿಲ್ಲುಗಳು ಇತ್ಯಾದಿ ಬಿಲ್ಲುಗಳನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ಪೀಠೋಪಕರಣಗಳ ನಿರ್ವಹಣೆ ಹಾಗು ಕಛೇರಿಯ ಬಾಡಿಗೆ ಬಿಲ್ಲು, ಕಛೇರಿಯ ವಾಹನ ಬಿಲ್ಲು, ದೂರವಾಣಿ ಬಿಲ್ಲು, ಆಫೀಸ್ ಖಾಯಂ ಮುಂಗಡ ಬಿಲ್ಲು, ಇತರೆ ಬಿಲ್ಲುಗಳನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ಖರ್ಚು ವೆಚ್ಚ ತಖ್ತೆ, ಟ್ರೆಶರಿ ಚಲನ್‌ಗಳ ಮರುಹೊಂದಾಣಿಕೆ ತಖ್ತೆ, ನಗದು ಪುಸ್ತಕ ನಿರ್ವಹಣೆ ಇತ್ಯಾದಿ. ಕಛೇರಿಯ ಆಡಳತ, ಲೆಕ್ಕ ಪತ್ರ, ಅನುದಾನ, ಆದಾಯ ತೆರಿಗೆ, ಮಾಹಿತಿ ಹಕ್ಕು ಅಧಿನಿಯಮ, ನ್ಯಾಯಾಲಯದ ಪ್ರಕರಣ, ವಿದ್ಯುಚ್ಛಕ್ತಿ ತೆರಿಗೆ ಇತ್ಯಾದಿ ಕೆಲಸ ಕಾರ್ಯಗಳಲ್ಲಿ ಮೇಲಾಧಿಕಾರಿಗಳಿಗೆ ಸಹಕರಿಸುವುದು, ದ್ವಿತೀಯ ದರ್ಜೆ ಸಹಾಯಕರುಗಳ ವಿಷಯ ನಿರ್ವಹಣಾ ಕೆಲಸ ಕಾರ್ಯಗಳ ಮೇಲ್ವಿಚಾರಣೆ, ಹಣ ಸ್ವೀಕೃತಿ ರಸೀದಿಗೆ ಕಛೇರಿಯ ಮುಖ್ಯಸ್ಥರ ಪರವಾಗಿ ಸಹಿ ಮಾಡುವುದು, ಸೇವೆಗಳು ಮತ್ತು ಸೇವಾ ನಿಯಮಗಳ ಪರಿಪಾಲನೆ, ಪ್ರಯಾಣ ವೆಚ್ಚದ ಬಿಲ್ಲುಗಳು, ಸಾದಿಲ್ವಾರು ವೆಚ್ಚದ ಬಿಲ್ಲು ಇತ್ಯಾದಿ ಬಿಲ್ಲುಗಳನ್ನು ಪರಿಶೀಲಿಸಿ, ಮೇಲಾಧಿಕಾರಿಗಳಿಗೆ ಮಂಡಿಸುವುದು. ಕಛೇರಿ ವ್ಯವಸ್ಥೆ ಮತ್ತು ನಿರ್ವಹಣೆ ಮತ್ತು ಖರ್ಚು ವೆಚ್ಚಗಳ ತಖ್ತೆ ನಿರ್ವಹಿಸುವುದು, ಸಿನಿಮಾ ಆಪರೇಟರ್ ಸಕ್ಷಮ ಪ್ರಮಾಣ ಪತ್ರದ ನವೀಕರಣ ಮತ್ತು ಹಿಂಬರಹಗಳನ್ನು ವಿದ್ಯುತ್ ಪರಿವೀಕ್ಷಕರ ನಿರ್ದೇಶನದಂತೆ ನಿರ್ವಹಿಸುವುದು, ಮಹಾ ಲೇಖಪಾಲರ ಆಡಿಟ್‌ಗೆ ಸಹಕರಿಸುವುದು, ಆಡಿಟ್‌ಗೆ ಸಂಬಂಧಿಸಿದ ಕಂಡಿಕೆಗಳಿಗೆ ಉತ್ತರಗಳನ್ನು ಸಿದ್ದಪಡಿಸಿ ನಿರ್ವಹಿಸುವುದು. ಖರ್ಚು ವೆಚ್ಚಗಳ ಅಂಕಿ ಅಂಶಗಳ ಮರು ಹೊಂದಾಣಿಕೆ ಪರಿಶೀಲಿಸಿ ಮಂಡಿಸುವುದು ಹಾಗು ಮೇಲಾಧಿಕಾರಿಗಳು ಸೂಚಿಸಿದ ಇತರೆ ಕೆಲಸಗಳನ್ನು ನಿರ್ವಹಿಸುವುದು. ಸಿಬ್ಬಂದಿ ವರ್ಗದವರ ಸೇವಾ ಪುಸ್ತಕಗಳನ್ನು ತಮ್ಮ ಅಧೀನದಲ್ಲ ಇರಿಸಿಕೊಳ್ಳುವುದು ಮತ್ತು ಸಿಬ್ಬಂದಿ ವರ್ಗದವರ ಆಸ್ತಿ ಮತ್ತು ಋಣಪಟ್ಟಿ ಸಂಬಂಧಿಸಿದಂತೆ ಕಡತಗಳ ನಿರ್ವಹಣೆ ಮಾಡುವುದು.

ದ್ವಿತೀಯ ದರ್ಜೆ ಸಹಾಯಕರು

ಸ್ವೀಕೃತಿ ಮತ್ತು ರವಾನೆ ರಿಜಿಸ್ಟರ್, ಸ್ಟಾಂಪ್ ಲೆಕ್ಕ ಪತ್ರ ರಿಜಿಸ್ಟರ್ ನಿರ್ವಹಣೆ, ಪತ್ರಗಳನ್ನು ದಾಖಲಿಸುವುದು ಹಾಗೂ ರವಾನಿಸುವುದು, ತಾಂತ್ರಿಕ / ತಾಂತ್ರಿಕೇತರ ಕಡತಗಳ ನಿರ್ವಹಣೆ, ವಿದ್ಯುತ್ ತೆರಿಗೆ ಜಿ ಮತು ಎಫ್ ನಮೂನೆಗಳ ಹಾಗೂ ಪುಸ್ತಕಗಳ ನಿರ್ವಹಣೆ, ವಿದ್ಯುಚ್ಛಕ್ತಿ ಯೂನಿಟ್ ಹಾಗು ತೆರಿಗೆಯ ಕ್ರೋಢೀಕರಣ ನಿರ್ವಹಣೆ, ಚಲನ ವಲನ ರಿಜಿಸ್ಟರ್ ನಿರ್ವಹಣೆ, ಡಿಸಿಬಿ ಪಟ್ಟಿಗಳ ನಿರ್ವಹಣೆ, ಟ್ರೆಶರಿ ಚಲನ್‌ಗಳ ಮರುಹೊಂದಾಣಿಕೆ ತಖ್ತೆಯನ್ನು ನಿರ್ವಹಿಸುವುದು, ಕಛೇರಿ ಮುಖ್ಯಸ್ಥರ ಸಲಹೆ ಮೇರೆಗೆ ಇನ್ನಿತರ ಆಡಳತಾತ್ಮಕ ಕಾರ್ಯ ನಿರ್ವಹಿಸುವುದು.

ಕಂಪ್ಯೂಟರ್ ಆಪರೇಟರ್:

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರ ಆಪ್ತ ಸಹಾಯಕರಾಗಿ ಕಚೇರಿ ಕೆಲಸ ಕಾರ್ಯಗಳು ನಿರ್ವಹಿಸುವುದು ಹಾಗೂ ಇತರೆ ಅಧಿಕಾರಿಗಳು ಸೂಚಿಸುವ ಕೆಲಸ ಕಾರ್ಯಗಳು ಮತ್ತು ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ ಬರುವ ಪತ್ರ ಮತ್ತು ಕಡತಗಳ ಚಲನವಲನಗಳನ್ನು ನಿರ್ವಹಿಸುವುದು. ಕಚೇರಿಯ ಎಲ್ಲಾ ಕಾಗದ ಪತ್ರಗಳನ್ನು ಬೆರಳಚ್ಚು ಮಾಡುವುದು.

ಗ್ರೂಪ್ ಡಿ ನೌಕರರು: ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

ಹೆಲ್ಪರ್: ಕಚೇರಿ ಮುಖ್ಯಸ್ಥರು ಸೂಚಿಸುವ ಕೆಲಸಗಳನ್ನು ನಿರ್ವಹಿಸುವುದು.

ಅ) ಇಲಾಖಾ ಕಾರ್ಯ ನಿರ್ವಹಿಸುವುದಕ್ಕೆ ಬಳಸುವ ನಿಯಮಗಳು ಅನುಸೂಚಿಗಳು, ಕೈಪಿಡಿ ಮತ್ತು ದಾಖಲೆಗಳು

1) ಕೆ.ಸಿ.ಎಸ್.ಆರ್- 1958.
2) ಕೆ.ಎಫ್.ಸಿ- 1958.
3) ಕೆ.ಟಿ.ಸಿ.
4) ಆಯ ವ್ಯಯ ಕೈಪಿಡಿ.
5) ಕಚೇರಿ ಕಾರ್ಯ ವಿಧಾನ ಕೈಪಿಡಿ.
6) ಕೆ.ಸಿ.ಎಸ್ (ಸಾಮಾನ್ಯ ನೇಮಕಾತಿ) 1977.
7) ಕೆ.ಸಿ.ಎಸ್ (ಪ್ರೋಬೇಷನ್) 1977.
8) ಕೆ.ಸಿ.ಎಸ್ (ಸಿಸಿಎ) ನಿಯಮಗಳು- 1957.
9) ಕೆ.ಸಿ.ಎಸ್ (ಕಾಂಡಕ್ಟ್) ನಿಯಮಗಳು- 1966.
10 ಕೆ.ಸಿಎಸ್ (ಜೇಷ್ಟತಾ) ನಿಯಮಗಳು.
11) ಕೆ.ಸಿ.ಎಸ್ (ಪಿಪಿ) ಆಕ್ಟ್ 1973 ಮತ್ತು ನಿಯಮಗಳು- 1978.

12) ಕೇಂದ್ರಿಯ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತಾ ಹಾಗೂವಿದ್ಯುತ್ ಪೂರೈಕೆಗೆ ಸಂಬಂಧಿಸಿದ) ನಿಬಂಧನೆಗಳು, 2010.
13) ಕರ್ನಾಟಕ ವಿದ್ಯುತ್ ಪರಿವೀಕ್ಷಣಾಲಯನಿಯಮಗಳು 2018
14) ಭಾರತೀಯ ವಿದ್ಯುತ್ ಕಾಯ್ದೆ – 2003.
15) ಕರ್ನಾಟಕ ಸಿನಿಮ (ನಿಯಂತ್ರಣ) ಕಾಯ್ದೆ 1964 ಮತ್ತು ನಿಯಮಗಳು 2014.
16) ಕರ್ನಾಟಕ ಲಿಫ್ಟ್ ಕಾಯ್ದೆ ಮತ್ತು ನಿಯಮಗಳು – 2015.
17) ಕರ್ನಾಟಕ ವಿದ್ಯುಚ್ಛಕ್ತಿ ಬಳಕೆ ಮತ್ತು ಮಾರಾಟದ ಮೇಲಿನ ತೆರಿಗೆ ಕಾಯ್ದೆ 1959 ಮತ್ತು ನಿಯಮಗಳು– 2014.
18) ನ್ಯಾಷನಲ್ ಎಲೆಕ್ಟ್ರಿಸಿಟಿ ಕೋಡ್ – 1985.
19) ಕಚೇರಿ ಕೈಪಿಡಿ.

ಆಡಳಿತಕ್ಕೆ ಸಂಬಂಧಪಟ್ಟಂತೆ ನಿರ್ವಹಿಸಿರುವ ರಿಜಿಸ್ಟರುಗಳು ಮತ್ತು ಕಡತಗಳು:

1. ಸೇವಾ ಪುಸ್ತಕಗಳು ಹಾಗೂ ವೇತನ ರಿಜಿಸ್ಟರ್‌ಗಳು.
2. ವೇತನ ಸೆಳೆತ : ಸಾಲ ವಸೂಲಿ ಮುಂಗಡಗಳು ಇದಕ್ಕೆ ಸಂಬಂಧಪಟ್ಟ ರಿಜಿಸ್ಟರುಗಳು.
3. ವೇತನ ಬಟವಾಡೆ ಹಾಗೂ ಪ್ರವಾಸ ಭತ್ಯೆ ಹಣ ಬಟವಾಡೆ ಪುಸ್ತಕ.
4. ಬಿಲ್ ರಿಜಿಸ್ಟರ್‌ಗಳು.
5. ಗಳಿಕೆ ರಜೆ ನಗದೀಕರಣ ಮತ್ತು ರಜಾ ಮಂಜೂರಾತಿ ರಿಜಿಸ್ಟರ್.
6. ಆಡಳಿತ ಮತ್ತು ಕೋರ್ಟ್ ಕೇಸ್ ಫೈಲ್.
7. ಅನುದಾನ ಅಂದಾಜು ಮತ್ತು ಅನುದಾನ ಹಂಚಿಕೆ ರಿಜಿಸ್ಟರ್‌ಗಳು.
8. ಕಚೇರಿ ವೆಚ್ಚ ರಿಜಿಸ್ಟರ್‌ಗಳು.
9. ಆಡಳಿತ ವಿಷಯಕ್ಕೆ ಸಂಬಂಧಪಟ್ಟ ಕಡತಗಳು.
10. ವೈದ್ಯಕೀಯ ವೆಚ್ಚ ಮರುಪಾವತಿ ಕಡತಗಳು.
11. ಸ್ವೀಕೃತಿ ರವಾನೆ ರಿಜಿಸ್ಟರ್‌ಗಳು.
12. ಸ್ಟಾಂಪ್ ಅಕೌಂಟ್ಸ್ ರಿಜಿಸ್ಟರ್‌ಗಳು.
13. ಸಾಮಾನ್ಯ ಆತಳತಾತ್ಮಕ ಸುತ್ತೋಲೆಗಳ ಕಡತ.
14. ಕೋರ್ಟ್ ಕೇಸ್ ಕಡತ.
15. ಆರ್. ಸಿ. ಬಿ ಫೈಲ್.
16. ನಗದು ಪುಸ್ತಕ ಮತ್ತು ರಶೀದಿ ಪುಸ್ತಕಗಳು.
17. ಡಿ.ಡಿ./ ಚೆಕ್ಕುಗಳನ್ನು ಬ್ಯಾಂಕಿಗೆ ಸಂದಾಯ ಮಾಡುವ ರಿಜಿಸ್ಟರ್‌ಗಳು.
18. ಖಾಯಂ ಮುಂಗಡ ರಿಜಿಸ್ಟರುಗಳು.
19. ಪೀಠೋಪಕರಣ ಹಾಗೂ ಲೈಬ್ರರಿ ಪುಸ್ತಕಗಳ ರಿಜಿಸ್ಟರ್‌ಗಳು.
20. ಸಾದಿಲ್ವಾರು ಬಿಲ್ಲುಗಳ ಕಡತಗಳು.
21. ಆರ್.ಟಿ.ಐ. ಕಡತ ಮತ್ತು ರಿಜಿಸ್ಟರ್‌ಗಳು.
22. ಹಾಜರಾತಿ ಪುಸ್ತಕಗಳು.
23. ಚಲನ ವಲನ ರಿಜಿಸ್ಟರ್‌ಗಳು.
24. ನಗದು ಘೋಷಣ ರಿಜಿಸ್ಟರ್‌ಗಳು.
25. ಕಚೇರಿ ಆದೇಶ ಪುಸ್ತಕಗಳು.
26. ಬಿಲ್ ರಿಜಿಸ್ಟರ್‌ಗಳು.

**III ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ: –**

ಇಲಾಖೆಯ ವಲಯ, ವಿಭಾಗ, ಉಪ ವಿಭಾಗ ಕಚೇರಿಗಳಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸಂಬಂಧಿಸಿದ ಅಧಿಕಾರಿಗಳು ನೀಲಿ ನಕ್ಷೆ ಪರಿಶೀಲಿಸುತ್ತಾರೆ, ನ್ಯೂನ್ಯತೆಗಳನ್ನು ಗ್ರಾಹಕರಿಗೆ ತಿಳಿಸಿ ಸರಿಪಡಿಸಿದ ನಕ್ಷೆಗಳನ್ನು ಅನುಮೋದನೆ ಮಾಡುತ್ತಾರೆ. ಗ್ರಾಹಕರಿಂದ ಸಮಾಪನಾ ವರದಿ ಸ್ವೀಕೃತಗೊಂಡನಂತರ, ಪ್ರಥಮ ಪರಿವೀಕ್ಷಣೆ ನೆಡೆಸಿ ಮುಂದಿನ ಕ್ರಮಕ್ಕೈಗೊಳ್ಳಲಾಗುತ್ತದೆ.

**IV ಇಲಾಖಾ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:–**

ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ತನ್ನ ಕಚೇರಿಯ ಕೆಲಸ ಸೂಸೂತ್ರವಾಗಿ ನಿರ್ವಹಿಸಲು ಪರಿವೀಕ್ಷಣಾ ಕೈಪಿಡಿ (ಮ್ಯಾನ್ಯುಯಲ್), ವಿದ್ಯುತ್ ಬಳಕೆ ಮೇಲಿನ ತೆರಿಗೆ ಕೈಪಿಡಿ, ಲಿಫ್ಟ್ ನಿಯಮಗಳು ಕೈಪಿಡಿಗಳನ್ನು ಮತ್ತು ಕರ್ನಾಟಕ ಸರ್ಕಾರದಿಂದ ಸೃಜನೆಗೊಂಡ ಕಚೇರಿ ನಿಯಮಗಳನ್ನು ಪಾಲಿಸಲಾಗಿರುತ್ತದೆ.

**VI ಇಲಾಖೆಯು ಹೊಂದಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:–**

ಅ) ಸೇವಾ ಪುಸ್ತಕಗಳು ಮತ್ತು ಬಡ್ತಿ ವಹಿ.
ಆ) ವೇತನ ವಹಿ.
ಇ) ಪೇ ಮತ್ತು ಪ್ರಯಾಣ ಭತ್ಯೆ ವಹಿ.
ಈ) ಬಿಲ್ ವಹಿ.

ಉ) ಗಳಿಕೆ ರಜೆ ನಗದೀಕರಣ ಮತ್ತು ರಜೆ ಮಂಜೂರಾತಿ ವಹಿ.
ಋ) ಸಾದಿಲ್ವಾರು ವಹಿ
ಎ) ಸ್ವೀಕೃತಿ ಮತ್ತು ರವಾನೆ ವಹಿ.
ಏ) ಸಾಮಾನ್ಯ ಆದೇಶ ಮತ್ತು ಸುತ್ತೋಲೆಗಳು.
ಅ) ನ್ಯಾಯಾಲಯ ವ್ಯಾಜ್ಯ ಕಡತ.
ಆ) ನಗದು ಪುಸ್ತಕ ಮತ್ತು ನಗದು ಪಾವತಿ ಪುಸ್ತಕ.
ಇ) ಡಿ.ಡಿ, ಚೆಕ್ ಮತ್ತು ಹಣ ರವಾನೆ ವಹಿ.
ಈ) ಮುಂಗಡ ಹಣ ಪಾವತಿ ವಹಿ.
ಉ) ಕಚೇರಿ ಕರ್ಚು ವೆಚ್ಚದ ಕ್ರೋಡಿಕೃತ 2045 ರಿಜಿಸ್ಟರ್.

16) ಮ್ಯಾನ್ಯುಯಲ್ ವಿಭಾಗ:-

ಅ) ವಿದ್ಯುತ್ ಸ್ಥಾವರಗಳ ಅಂಕಿ ಅಂಶಗಳ ವಿವರಗಳು.
ಆ) ಲಿಫ್ಟ್ ಸ್ಥಾಪನಾ ಪರವಾನಗಿ ಮತ್ತು ಅನುಮೋದನೆ ರಿಜಿಸ್ಟರ್‌ಗಳು.
ಇ) ವಿದ್ಯುತ್ ಅಪಘಾತಗಳ ಅಂಕಿ ಅಂಶಗಳ ರಿಜಿಸ್ಟರ್‌ಗಳು.
ಈ) ಕಚೇರಿ ಗಣಕ ಯಂತ್ರಗಳ ರಿಜಿಸ್ಟರ್‌ಗಳು.
ಉ) ಪ್ರಗತಿ ಪರಿಶೀಲನಾ ಸಭೆಗಳ ರಿಜಿಸ್ಟರ್‌ಗಳು.
ಊ) ಸಾಮಾನ್ಯ ಪತ್ರ ವ್ಯವಹಾರಗಳ ರಿಜಿಸ್ಟರ್‌ಗಳು.
ಋ) ತಂತ್ರಿಕ ಸುತ್ತೋಲೆಗಳ ರಿಜಿಸ್ಟರ್‌ಗಳು.

ತಾಂತ್ರಿಕ ವಿಭಾಗ:--
ಎ) ನೀಲಿ ನಕ್ಷೆ ಅನುಮೋದನೆ ರಿಜಿಸ್ಟರ್‌ಗಳು.
ಬಿ) ಚಾಲನಾ ಅನುಮೋದನೆರಿಜಿಸ್ಟರ್‌ಗಳು.
ಸಿ) ವಾರ್ಷಿಕ ಮಾಹಿತಿ ಹಕ್ಕು ರಿರ್ಟನ್‌ಗಳು – (ಫಾರ್ಮ 1, 2, 3).
ಡಿ) ವಿದ್ಯುತ್ ಅಪಘಾತಗಳ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.
ಇ) ತಾಂತ್ರಿಕ ಪತ್ರ ವ್ಯವಹಾರಗಳ ಮತ್ತು ಸುತ್ತೋಲೆಗಳ ರಿಜಿಸ್ಟರ್‌ಗಳು.

**VII ಇಲಾಖೆಯ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ವ್ಯವಸ್ಥೆಯ ವಿವರಗಳು**
– ಈ ಕಚೇರಿಗೆ ಅನ್ವಯಿಸುವುದಿಲ್ಲ.

**VIII ಮಂಡಳಿಗಳು, ಪರಿಷತ್ತುಗಳು ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡಾವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ ಪಟ್ಟಿ**

– ಈ ಕಚೇರಿಗೆ ಅನ್ವಯಿಸುವುದಿಲ್ಲ,

**IX ಅಧಿಕಾರಿಗಳು ಮತ್ತು ನೌಕರ ನಿರ್ದೇಶಿಕೆ:-**

| ಕ್ರ. ಸಂ | ಹುದ್ದೆಯ ವರ್ಗ | ಹೆಸರು ಶ್ರೀಯುತ/ಶ್ರೀಮತಿ | ಟೆಲಿಫೋನ್ ಸಂಖ್ಯೆ |
|---|---|---|---|
| 1 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಸಿ.ಎಸ್. ಮುರಳೀಧರ್ | 080-26612080 |
| 2 | ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಎಲ್ ಮೇಘನಾಯ್ಕ್ | 080-26612080 |
| 3 | ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಕಿರಣ್ ಹೆಚ್.ಸಿ | 080-26612080 |
| 4 | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕ್ಷೇತ್ರೀಯ-1) | ಖಾಲಿ ಹುದ್ದೆ | 080-26612080 |
| 5 | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕ್ಷೇತ್ರೀಯ-2) | ಶ್ರೀಮತಿ ಅಪರ್ಣ.ಆರ್.ಸಿ (ಪ್ರಭಾರ) | 080-26612080 |
| 6 | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ) | ಶ್ರೀಮತಿ ಅಪರ್ಣ.ಆರ್.ಸಿ | 080-26612080 |
| 7 | ಅಧೀಕ್ಷಕರು | ಶ್ರೀಮತಿ ವೀಣಾ ಹೆಚ್.ಬಿ | 080-26612080 |

| | | | |
|---|---|---|---|
| 8 | ಪ್ರಥಮ ದರ್ಜೆ ಸಹಾಯಕರು, | ಶ್ರೀಮತಿ ಶಿಲ್ಪಾ ವಿ ರಾಯ್ಕರ್ | 080-26612080 |
| 9 | ದ್ವಿತೀಯ ದರ್ಜೆ ಸಹಾಯಕರು-1 | ಖಾಲಿ ಹುದ್ದೆ | 080-26612080 |
| 10 | ದ್ವಿತೀಯ ದರ್ಜೆ ಸಹಾಯಕರು-2 | ಖಾಲಿ ಹುದ್ದೆ | 080-26612080 |
| 11 | ಕಂಪ್ಯೂಟರ್ ಆಪರೇಟರ್ (ಹೊರಗುತ್ತಿಗೆ) | ಶ್ರೀಮತಿ ದೀಪಿಕಾ | 080-26612080 |
| 12 | ಸಹಾಯಕರು | ಖಾಲಿ ಹುದ್ದೆ | 080-26612080 |
| 13 | ಜವಾನರು | ಶ್ರೀಮತಿ ಚಂದ್ರಮ್ಮ | 080-26612080 |

**X ಇಲಾಖೆಯ ನಿಯಮನಗಳಲ್ಲಿ ಉಪಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ :-**

| ಕ್ರ. ಸಂ | ಹುದ್ದೆಯ ವರ್ಗ | ಮಂಜೂರಾದ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | 74400-109600 |
| 2 | ವಿದ್ಯುತ್ ಪರಿವೀಕ್ಷಕರು | 01 | 67550-104600 |
| 3 | ಉಪ ವಿದ್ಯುತ್ ಪರಿವೀಕ್ಷಕರು | 01 | 52650-97100 |
| 4 | ಸಹಾಯಕ ವಿದ್ಯುತ್ ಪರಿವೀಕ್ಷಕರು-1, 2 & ತಾಂತ್ರಿಕ | 03 | 43100-83900 |
| 5 | ಅಧೀಕ್ಷಕರು | 01 | 37900-70850 |
| 6 | ಪ್ರಥಮ ದರ್ಜೆ ಸಹಾಯಕರು | 01 | 27650-52650 |
| 7 | ದ್ವಿತೀಯ ದರ್ಜೆ ಸಹಾಯಕರು | 02 | 21400-42000 |
| 8 | ಕಂಪ್ಯೂಟರ್ ಆಪರೇಟರ್ | Out sourcing | |
| 9 | ಹೆಲ್ಪರ್ | 01 | 19950-37900 |
| 10 | ಜವಾನರು | 01 | 19950-37900 |

**XI ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯ:**

– ಈ ಇಲಾಖೆಗೆ ಅನ್ವಯಿಸುವುದಿಲ್ಲ

–

**XII ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ**

– ಈ ಇಲಾಖೆಗೆ ಸಂಬಂಧಿಸಿರುವುದಿಲ್ಲ

**XIII ನೀಡಿರುವ ರಿಯಾಯತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ**

– ಈ ಇಲಾಖೆಗೆ ಅನ್ವಯಿಸುವುದಿಲ್ಲ

–

**XIV ಕಛೇರಿಯ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ**

ಈ ಇಲಾಖೆಯು ವಿದ್ಯುನ್ಮಾನ ರೂಪದ ಪ್ರಕ್ರಿಯೆಯಲ್ಲಿರುವುದರಿಂದ ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಮಾಹಿತಿಯು ಸಂಪೂರ್ಣವಾಗಿ ಲಭ್ಯವಿರುವುದಿಲ್ಲ.

**XV ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.**

ಸಾರ್ವಜನಿಕರು ಈ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿರುತ್ತದೆ.ಪ್ರತ್ಯೇಕ ಓದುವ ಕೋಣೆ ಇರುವುದಿಲ್ಲ.

**XVI. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರ ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು.**

| ಕ್ರ. ಸಂ | ಹುದ್ದೆಯ ವರ್ಗ | ಹೆಸರುಶ್ರೀಯುತ/ಶ್ರೀಮತಿ |
|---|---|---|
| 1. | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಮುರಳೀಧರ್ ಸಿ.ಎಸ್, ಮೇಲ್ಮನವಿ ಪ್ರಾಧಿಕಾರ |
| 2. | ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಎಲ್ ಮೇಘನಾಯ್ಕ್, ಸಾರ್ವಜನಿಕ ಮಾಹಿತಿ ಅಧಿಕಾರಿ (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತ್ಯಾ ಯೋಜನೆ ಅನುಸಾರ) |
| 3. | ಉಪ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ | ಶ್ರೀ ಕಿರಣ್ ಹೆಚ್.ಸಿ ಸಾರ್ವಜನಿಕ ಮಾಹಿತಿ ಅಧಿಕಾರಿ (ಪರಿವೀಕ್ಷಣಾ ವ್ಯಾಪ್ತಿ ಹಾಗೂ ಅಧಿಕಾರ ಪ್ರತ್ಯಾ ಯೋಜನೆ ಅನುಸಾರ) |
| 4. | ಸಹಾಯಕ ವಿದ್ಯುತ್ ಪರಿವೀಕ್ಷಕರು(ಕಛೇರಿ). | ಶ್ರೀಮತಿ ಅಪರ್ಣ.ಆರ್.ಸಿ, ಸಾರ್ವಜನಿಕ ಮಾಹಿತಿ ಅಧಿಕಾರಿ, (ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ಪಶ್ಚಿಮ ರವರ ಅಧಿಕಾರ ಪ್ರತ್ಯಾ ಯೋಜನೆ ಅನುಸಾರ ತಾಂತ್ರಿಕ ವಿವರಗಳಿಗೆ ಸಂಬಂಧಪಟ್ಟಂತೆ) |
| 5. | ಅಧೀಕ್ಷಕರು | ಶ್ರೀಮತಿ ವೀಣಾ ಹೆಚ್ ಬಿ ಸಾರ್ವಜನಿಕ ಮಾಹಿತಿ ಅಧಿಕಾರಿ, (ಕಛೇರಿಯ ಆಡಳಿತಕ್ಕೆ ಸಂಬಂಧಿಸಿದ ವಿವರಗಳು-ತೆರಿಗೆ, ಪರವಾನಿಗೆ, ಸಿನೆಮಾ ಆಪರೇಟರ್ ಪರ್ಮಿಟ್, ಲೆಕ್ಕ ಪತ್ರ, ಇತ್ಯಾದಿ) |

**XVII.ಮಾಹಿತಿ ಹಕ್ಕು ನಿಯಮಕ್ಕೆ ಸಂಬಂಧಪಟ್ಟಂತೆ ಬೇರಾವುದೇ ಮಾಹಿತಿ ಹಾಗೂ ಈ ಮಾಹಿತಿಯನ್ನು ಪ್ರತೀ ವರ್ಷ ಪರಿಷ್ಕರಿಸಿ ಸಾರ್ವಜನಿಕರಿಗೆ ತೆರೆದಿಡುವ ಬಗ್ಗೆ:**

ಪ್ರತೀ ವರ್ಷ ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಮಾಹಿತಿಯನ್ನು ಪರಿಷ್ಕರಿಸಿ ಸಾರ್ವಜನಿಕರಿಗೆ ತೃಪ್ತಿಯಾಗುವಂತೆ ಡಾಟಬೇಸನ್ನು ಅಪ್‌ಡೇಟ್ ಮಾಡಲಾಗುವುದು.

ಅಧಿಕಾರ ಪ್ರತ್ಯಾಯೋಜನೆಯ ವಿವರಗಳು ಇಲಾಖೆಯ ತಾಂತ್ರಕ ವೆಬ್‌ಸೈಟ್http://www.ksei.gov.inನಲ್ಲಿಲಭ್ಯವಿರುತ್ತದೆ.

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, 15/3/2022
ಬೆಂಗಳೂರು ಪಶ್ಚಿಮ, ಬೆಂಗಳೂರು.
Deputy Chief Electrical Inspector
Bangalore West
Bangalore

*************************************************************************************

ಮೆಮೊ ಸಂಖ್ಯೆ:ಉಮುವಿಪ(ಬೆಂ.ಪ)/ಕ-ಆಡಳಿತ(ಆರ್.ಟಿ.ಐ)/2021-22/ 6571-81 ದಿನಾಂಕ: 15 MAR 2022

<u>ಪ್ರತಿಯನ್ನು ಗೌರವಗಳೊಂದಿಗೆ ಸಲ್ಲಿಸಲಾಗಿದೆ:</u>

1. ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಇಂಧನ ಇಲಾಖೆ, ಬೆಂಗಳೂರುರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಅಪರ ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಕರು, ಬೆಂಗಳೂರು ದಕ್ಷಿಣ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಸಂಬಂಧಪಟ್ಟ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಎಲ್ಲಾ ಮಾಹಿತಿಯನ್ನು ಸರ್ಕಾರಿ ಆದೇಶದಂತೆ ನಿರ್ವಹಿಸುವುದು.
5. ಕಛೇರಿ ಕಡತ/ಪ್ರಧಾನ ಕಡತ.
6. ಸೂಚನ ಪಲಕ

ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು 15/3/2022
ಬೆಂಗಳೂರು ಪಶ್ಚಿಮ, ಬೆಂಗಳೂರು
Deputy Chief Electrical Inspector
Bangalore West
Bangalore